PAPER CLIPPINGS
ವಿಭಾಗ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE:

# ಕೇಂದ್ರ, ರಾಜ್ಯಕ್ಕೆ ತಲಾ ಶೇ.20 ವೆಚ್ಚ ಹಂಚಿಕೆ

## ಬೆಂಗಳೂರು ಉಪನಗರ ರೈಲು ಯೋಜನೆ | 148.17 ಕಿ.ಮೀ. ಮಾರ್ಗ, ₹15,767 ಕೋಟಿ ವೆಚ್ಚ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜಧಾನಿಯ ಬಹುಬೇಡಿಕೆಯ 'ಬೆಂಗಳೂರು ಉಪನಗರ ರೈಲು ಯೋಜನೆ'ಯ 15,767 ಕೋಟಿ ರೂ. ವೆಚ್ಚದ 148.17 ಕಿ.ಮೀ. ಮಾರ್ಗದ ಡಿಪಿಆರ್‌ಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದ ಬೆನ್ನಲ್ಲೇ ಯೋಜನೆ ಅನುಷ್ಠಾನಕ್ಕೆ ತಗುಲುವ ವೆಚ್ಚವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಹಂಚಿಕೆ ಮಾಡಲಾಗಿದೆ.



ವಿಶೇಷ ಉದ್ದೇಶ ವಾಹನ (ಎಸ್‌ಪಿವಿ) ಮಾದರಿಯಲ್ಲಿ ಕರ್ನಾಟಕ ರೈಲ್ವೆ ಮೂಲ ಸೌಕರ್ಯ ಅಭಿವೃದ್ಧಿ ಸಂಸ್ಥೆ (ಕೆ-ರೈಡ್) ಈ ಯೋಜನೆ ಅನುಷ್ಠಾನದ ಹೊಣೆ ಹೊತ್ತಿದೆ. ಎಸ್‌ಪಿವಿಯಡಿ ಒಟ್ಟು 15,767 ಕೋಟಿ ರೂ. ಯೋಜನಾ ವೆಚ್ಚವನ್ನು 20:20:60 ಅನುಪಾತದಲ್ಲಿ ಹಂಚಿಕೆ ಮಾಡಲಾಗಿದೆ. ಅಂದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಕ್ರಮವಾಗಿ 3,242 ಕೋಟಿ ರೂ. ಹಾಗೂ 4,734 ಕೋಟಿ ರೂ. ಅನುದಾನ ನೀಡಲಿವೆ. ಉಳಿದ 7,791 ಕೋಟಿ ರೂ.ಗಳನ್ನು ಕೆ-ರೈಡ್ ಸಂಸ್ಥೆ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಬೇಕಾಗುತ್ತದೆ.

» ಆರು ವರ್ಷಗಳಲ್ಲಿ ಯೋಜನೆ ಪೂರ್ಣ

148.17 ಕಿ.ಮೀ. ಮಾರ್ಗದ ಈ ಯೋಜನೆಯಲ್ಲಿ ಪ್ರಮುಖವಾಗಿ ನಾಲ್ಕು ಕಾರಿಡಾರ್ ನಿರ್ಮಿಸಲಾಗುತ್ತಿದ್ದು, ಆರು ವರ್ಷದಲ್ಲಿ ಯೋಜನೆಯನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಈ ಪೈಕಿ ಆದ್ಯತೆ ಮೇರೆಗೆ ಕೆಎಸ್‌ಆರ್ ಬೆಂಗಳೂರು-ದೇವನಹಳ್ಳಿ 41.40 ಕಿ.ಮೀ. ಕಾರಿಡಾರ್ ಮೂರು ವರ್ಷದೊಳಗೆ ಪೂರ್ಣಗೊಳಿಸಲು ಯೋಜನೆ ರೂಪಿಸಲಾಗುತ್ತಿದೆ.

ಕೇಂದ್ರ ಸರ್ಕಾರ 2020-21ನೇ ಸಾಲಿನ ಬಜೆಟ್‌ನಲ್ಲಿ ಯೋಜನೆ ಅನುಷ್ಠಾನದ ಬಗ್ಗೆ ಘೋಷಣೆ ಮಾಡಿತ್ತು. ಇದರ ಬೆನ್ನಲ್ಲೇ ಯೋಜನೆಯ ಪರಿಷ್ಕೃತ ಡಿಪಿಆರ್‌ಗೆ ರೈಲ್ವೆ ಮಂಡಳಿ ಒಪ್ಪಿಗೆ ನೀಡಿತ್ತು. ಆದರೆ, ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ (ಸಿಸಿಇಎ) ಅನುಮೋದನೆ ಬಾಕಿ ಇತ್ತು. ಇದೀಗ ಸಮಿತಿ ಅನುಮೋದನೆ ನೀಡಿರುವುದರಿಂದ ಶೀಘ್ರದಲ್ಲೇ ಅನುಷ್ಠಾನವಾಗಲಿದೆ.

### 25 ಲಕ್ಷಕ್ಕೂ ಹೆಚ್ಚು ಮಂದಿಗೆ ಅನುಕೂಲ

ಉಪ ನಗರ ರೈಲು ಯೋಜನೆ ಅನುಷ್ಠಾನದಿಂದ ನಗರದ ಸಂಚಾರ ದಟ್ಟಣೆಗೆ ದೊಡ್ಡ ಪರಿಹಾರ ಸಿಕ್ಕಂತಾಗುತ್ತದೆ. ಸುಮಾರು 25 ಲಕ್ಷ ಮಂದಿಗೆ ನಿತ್ಯ ಈ ರೈಲಿನ ಉಪಯೋಗ ಪಡೆದುಕೊಳ್ಳಲ್ಲಿದ್ದಾರೆ. ಭವಿಷ್ಯದಲ್ಲಿ ತುಮಕೂರು, ರಾಮನಗರ, ಬಂಗಾರಪೇಟೆಗೂ ಮಾರ್ಗ ವಿಸ್ತರಿಸಲು ಅವಕಾಶವಿದೆ. ಇದರಿಂದ ಲಕ್ಷಾಂತರ ಮಂದಿಗೆ ಉತ್ತಮ ಸಾರಿಗೆ ಸೌಲಭ್ಯ ಲಭ್ಯವಾಗಲಿದೆ.

### ಯೋಜನೆ ಅನುಷ್ಠಾನದ ವೆಚ್ಚ
(ಕೋಟಿ ರೂ.ಗಳಲ್ಲಿ)

| | |
|---|---|
| ಭೂಸ್ವಾಧೀನ 1,470 | ಭದ್ರತೆ ಮತ್ತು ಸಿಬ್ಬಂದಿ 379 |
| ಅಲೈನ್‌ಮೆಂಟ್, ಫಾರ್ಮೇಷನ್, ಏರ್‌ಪೋರ್ಟ್ ಸಂಪರ್ಕ 4,125 | ಸಿಜಿಎಸ್‌ಟಿ ಎಸ್‌ಜಿಎಸ್‌ಟಿ 1,341 |
| ನಿಲ್ದಾಣಗಳ ಕಟ್ಟಡ 1,981 | ಸಿಗ್ನಲಿಂಗ್ ಮತ್ತು ಟೆಲಿಕಾಂ 1,373 |
| ಪರ್ಮನೆಂಟ್ ವೇ 727 | ಇಂಟರ್ ಡಿಸಿಪ್ಲೀನರಿ ಚೆಕ್ ಟೆಕ್ನಾಲಜಿ 353 |
| ನಿಲ್ದಾಣ 310 | ಪ್ರತಿ ವರ್ಷ ಶೇ.5 ವೆಚ್ಚದ ಹೆಚ್ಚಳ 1,841 |
| ಶುಲ್ಕಗಳು 815 | |
| ವಿದ್ಯುತ್ ಪೂರೈಕೆ 1,050 | ಒಟ್ಟು 15,767 |

### ಪ್ರಮುಖ ಕಾರಿಡಾರ್‌ಗಳು

| | |
|---|---|
| ಕೆಎಸ್‌ಆರ್ ಬೆಂಗಳೂರು ನಿಲ್ದಾಣ-ದೇವನಹಳ್ಳಿ | 41.40 ಕಿ.ಮೀ. |
| ಬೈಯಪ್ಪನಹಳ್ಳಿ ಟರ್ಮಿನಲ್-ಚಿಕ್ಕಬಾಣಾವಾರ | 25.01 ಕಿ.ಮೀ. |
| ಕೆಂಗೇರಿ-ವೈಟ್‌ಫೀಲ್ಡ್ | 35.52 ಕಿ.ಮೀ. |
| ಹೀಲಲಿಗೆ ನಿಲ್ದಾಣ-ರಾಜಾನುಕುಂಟೆ | 46.24 ಕಿ.ಮೀ. |

# ಸಬ್ ಅರ್ಬನ್ ರೈಲಿಗೆ ಕೇಂದ್ರದಿಂದ ಒಪ್ಪಿಗೆ

ಬೆಳಗಾವಿ: ಉದ್ಯಾನನಗರಿ ಬೆಂಗಳೂರಿನ ಸಂಚಾರದಟ್ಟಣೆ ಸಮಸ್ಯೆಯನ್ನು ನಿವಾರಿಸುವ ಉದ್ದೇಶದಿಂದ ರೂಪಿಸಲಾದ ಉಪನಗರ ರೈಲು ಯೋಜನೆಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ. ಕೇಂದ್ರ ಆರ್ಥಿಕ ಸಚಿವಾಲಯವು ಅ.7ರಂದು ನಡೆಸಿದ ಸಭೆಯಲ್ಲಿ ಅಂದಾಜು 13,926 ಕೋಟಿ ರೂ.ವೆಚ್ಚದಲ್ಲಿ 148 ಕಿ.ಮೀ. ಉದ್ದದ ರೈಲು ಮಾರ್ಗ ನಿರ್ಮಾಣಕ್ಕೆ ಸಹಿ ಹಾಕಿದ್ದು, ಕಾಮಗಾರಿ ಪೂರ್ಣಗೊಳ್ಳುವಷ್ಟರಲ್ಲಿ 15,767 ಕೋಟಿ ರೂ. ವೆಚ್ಚ ತಗುಲಬಹುದು ಎಂದು ಅಂದಾಜಿಸಲಾಗಿದೆ. ಯೋಜನೆಯಡಿ ಕೆಎಸ್‌ಆರ್ ಬೆಂಗಳೂರು ಸಿಟಿ- ದೇವನಹಳ್ಳಿ, ಚಿಕ್ಕಬಾಣಾವರ- ಬೈಯಪ್ಪನಹಳ್ಳಿ, ಕೆಂಗೇರಿ- ವೈಟ್‌ಫೀಲ್ಡ್ ಹಾಗೂ ಹೀಲಲಿಗೆ- ರಾಜಾನುಕುಂಟೆ ಮಾರ್ಗಗಳಲ್ಲಿ ಕಾಮಗಾರಿ ನಡೆಯಲಿದೆ.

» ಸಂಚಾರದಟ್ಟಣೆ ಕಡಿವಾಣಕ್ಕೆ ಯೋಜನೆ

» ರೈಲು ಮಾರ್ಗ ನಿರ್ಮಾಣಕ್ಕೆ ಸಚಿವಾಲಯ ಹಸಿರುನಿಶಾನೆ

### ಸುರೇಶ ಅಂಗಡಿ ವರದಿಯ ಫಲ



ರೈಲ್ವೆ ಖಾತೆ ಸಹಾಯಕ ಸಚಿವರಾಗಿದ್ದ ಸುರೇಶ ಅಂಗಡಿ ಅವರ ಕನಸಿನಂತೆ ಇದೀಗ ಬೆಂಗಳೂರಿನಲ್ಲಿ ಬಹುನಿರೀಕ್ಷಿತ ಸಬ್ ಅರ್ಬನ್ ರೈಲು ಯೋಜನೆಗೆ ಕೇಂದ್ರ ಸಚಿವಾಲಯ ಒಪ್ಪಿಗೆ ಸೂಚಿಸಿದೆ. ರಾಜ್ಯದಲ್ಲಿ ಇನ್ನು ಹಲವು ರೈಲ್ವೆ ಯೋಜನೆಗಳನ್ನು ರೂಪಿಸಿದ್ದ ಅಂಗಡಿ, ತಾವು ಇದ್ದಾಗಲೇ ಯೋಜನೆಯ ಅವಶ್ಯಕತೆ ಮತ್ತು ಅದರಿಂದ ಜನರಿಗಾಗುವ ಅನುಕೂಲದ ಬಗ್ಗೆ ವಿಸ್ತೃತ ವರದಿ ಸಲ್ಲಿಸಿದ್ದರು. ಅದು ಇದೀಗ ಫಲ ನೀಡುತ್ತಿದೆ ಎಂದು ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವ ಜಗದೀಶ ಶೆಟ್ಟರ್‌ಹೇಳಿದ್ದಾರೆ.